1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.92/2020

ದಿಃ 12.02.2021
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-1 Pw-1

| | | |
|---|---|---|
| ಹೆಸರು | ಃ | ರವಿಕುಮಾರ್ |
| ತಂದೆಯ ಹೆಸರು | ಃ | ಲೇ. ಭೈರಪ್ಪ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | ಃ | ಚರ್ಚ್‌ನಲ್ಲಿ ಬೋದಕ |
| ವಾಸಸ್ಥಳ | ಃ | ಆನಂದಪುರ,<br>ಚನ್ನಪಟ್ಟಣ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.2 ನನ್ನ ಹೆಂಡತಿ. ಚಾಸಾ.3ರಿಂದ 9ರವರು ನನಗೆ ಗೊತ್ತು. ಆರೋಪಿಗಳು ಗೊತ್ತು. ದಿಃ25.02.2020ರಂದು ಮಂಗಳವಾರ ಸಂಜೆ 7.00 ಗಂಟೆಗೆ ಸಂತೆಮೊಗೇನಹಳ್ಳಿ ತಿರುವಿನ ಬಳಿ ಭೂಮಿಯನ್ನು ಖರೀದಿಸಿದ್ದು, ಅದರ ಹದ್ದುಬಸ್ತಿಗಾಗಿ ಕಲ್ಲುಗಳನ್ನು ನಾನು ಮತ್ತು ಚಾಸಾ.2ರಿಂದ 9ರವರುಗಳು ಹಾಕಿ ಹೊರಗೆ ಬರುತ್ತಿದ್ದಾಗ 1ನೇ ಆರೋಪಿ ಬಂದು ನೀವು ಯಾರು ಕಲ್ಲುಗಳನ್ನು ಹಾಕಲು ಎಂದು ಕೇಳಿದರು. ನೀವು ಕ್ರೈಸ್ತರು, ಎಸ್‌ಸಿ ಜಾತಿಯವರು ಎಂದರು. ನೀವ್ಯಾರು ಎಂದು ಕೇಳಿದಾಗ ಅವರು ಬೋಳಿ ನನ್ನ ಮಗನೇ, ಹಲ್ಕ

ನನ್ನ ಮಗನೇ, ಎಸ್ ಸಿಗಳು, ದಲಿತರು, ನೀವು ಮತಾಂತರ ಮಾಡಲು ಬಂದಿದ್ದೀರಾ, ಯಾರು ನಿಮಗೆ ಜಾಗ ಕೊಟ್ಟವರು ಎಂದು ನನ್ನನ್ನು ಹೊಡೆಯಲು ಬಂದಾಗ ಚಾಸಾ.4ರವರು ಅಡ್ಡಬಂದರು, ಆಗ 1ನೇ ಆರೋಪಿ ಅವರಿಗೆ ಕತ್ತಿನ ಮೇಲೆ ಕೈಯ್ಯಲ್ಲಿ ಹೊಡೆದಿರುತ್ತಾರೆ. ಅವರನ್ನು ಬಿಡಿಸಲು ಬಂದಾಗ ಚಾಸಾ.3ರವರು ಅಡ್ಡಬಂದಿದ್ದು, ಅವರಿಗೂ ಸಹ ಜಾತಿ ಹಿಡಿದು ಹಲ್ಕ ಜಾತಿಯವರು, ಕೀಳು ಜಾತಿಯವರು ಎಂದು ನಿಂದಿಸಿ, ಕೈಯ್ಯಿಂದ ಕಪಾಲಕ್ಕೆ ಹೊಡೆದರು. ನಂತರ ನನ್ನ ಪತ್ನಿ ಚಾಸಾ.2, 5, 6ರವರು ಅವರನ್ನು ಬಿಡಿಸಲು ಬಂದಾಗ 2 ಮತ್ತು 3ನೇ ಆರೋಪಿಗಳು 1ನೇ ಆರೋಪಿಯ ಜೊತೆಗಿದ್ದು ಅವರುಗಳು ಚಾಸಾ.2, 5 ಮತ್ತು 6ರವರಿಗೆ ಬಟ್ಟೆಗಳನ್ನು ಹಿಡಿದು ಎಳೆದಾಡಿ ಹಲ್ಲೆ ಮಾಡಿದರು. ನಂತರ ಆರೋಪಿಗಳು ಮತ್ತೆ ನೀವು ಈ ಜಾಗಕ್ಕೆ ಬಂದರೆ ನಿಮ್ಮನ್ನು ಬಿಡುವುದಿಲ್ಲ ಸಾಯಿಸುತ್ತೇವೆ, ಇದು ನಮ್ಮ ಜಾಗ ಎಂದು ಆರೋಪಿಗಳು ಹೆದರಿಸಿದರು. ನಂತರ ನಾವು ಸ್ಥಳದಿಂದ ಹೊರಟು ಹೋಗಿರುತ್ತೇವೆ. ಅದೇ ದಿನ ರಾತ್ರಿ ಆರೋಪಿಗಳು ನಾವು ನೆಟ್ಟಿದ್ದ ಕಲ್ಲುಕಂಬಗಳನ್ನು 3 ತುಂಡುಗಳಾಗಿ ಮಾಡಿ, ಕಿತ್ತು ಹಾಕಿ ಸುಮಾರು ರೂ 1 ಲಕ್ಷಗಳಷ್ಟು ನಷ್ಟ ಮಾಡಿರುತ್ತಾರೆ. ನಂತರ ಮಾರನೇ ದಿನ ನನಗೆ ಕಲ್ಲುಕಂಬಗಳನ್ನು

ಒಡೆದು ಹಾಕಿರುವ ಬಗ್ಗೆ ಚಾಸಾ.9 ರವರು ದೂರವಾಣಿ ಕರೆ ಮಾಡಿ, ನಾನು ಬೆಂಗಳೂರಿಗೆ ಪ್ರಾರ್ಥನೆಗಾಗಿ ಹೋಗಿದ್ದಾಗ ತಿಳಿಸಿದರು. ಅದರಂತೆ ನಾನು 26 ನೇ ತಾರೀಖಿನಂದು ಕಲ್ಲು ಒಡೆದದ್ದನ್ನ ತಿಳಿದು ಸಂಜೆ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸಾಕ್ಷಿದಾರರು ದೂರು ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಅವುಗಳನ್ನು ನಿ.ಪಿ.1 ಮತ್ತು 1(ಎ) ಎಂದು ಗುರುತಿಸಲಾಯಿತು. ನಂತರ ಮಾರನೇ ದಿನ ಸಂಜೆ 4.30 ಕ್ಕೆ ಪೊಲೀಸರು ಸ್ಥಳಕ್ಕೆ ಬಂದು ವರದಿ ಬರೆದು ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿದಾರರು ಮಹಜರ್ ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಅವುಗಳನ್ನು ನಿ.ಪಿ.2 ಮತ್ತು 2(ಎ) ಎಂದು ಗುರುತಿಸಲಾಯಿತು. ಪೊಲೀಸರು ನಿ.ಪಿ.2 ರ ಕಾಲದಲ್ಲಿ ಭಾವಚಿತ್ರಗಳನ್ನ ಸಹ ತೆಗೆದರು. ಕಡತದಲ್ಲಿನ 4 ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಲಾಗಿ ಅವುಗಳನ್ನು ಗುರುತಿಸಿದ್ದು, ಅವುಗಳನ್ನು ನಿ.ಪಿ.3 ರಿಂದ 6 ಎಂದು ಗುರುತಿಸಲಾಯಿತು. ನಿ.ಪಿ.3 ಮತ್ತು 4 ಭಾವಚಿತ್ರಗಳನ್ನು ನಿ.ಪಿ.2 ಮಹಜರ್ ಮತ್ತು ಘಟನೆಗೆ ಮುನ್ನ ನಾನೇ ತೆಗೆದಿರುತ್ತೇನೆ. ನಾನು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ಮತ್ತು ಗೈರು ಹಾಜರಿರುವ 1 ನೇ ಆರೋಪಿಯನ್ನು ಸಾಕ್ಷಿ ಗುರುತಿಸಿರುತ್ತಾರೆ.

ಚಾಸಾ.3 ಎಸ್.ಸಿ. ಜಾತಿಯವರಿರುತ್ತಾರೆ. ಆರೋಪಿಗಳು ಯಾವ ಜಾತಿಯವರೆಂದು ನನಗೆ ಗೊತ್ತಿಲ್ಲ. ನನಗೆ ಆರೋಪಿಗಳು ಘಟನೆಗೆ ಮುನ್ನ ಪರಿಚಯವಿರಲಿಲ್ಲ. ನನಗೂ ಮತ್ತು ಅವರಿಗೂ ಯಾವುದೇ ಸಂಬಂಧ ಇರಲಿಲ್ಲ. ನಮ್ಮ ಊರಿಗೂ ಆರೋಪಿಗಳ ಊರಿಗೂ ಸುಮಾರು 6-7 ಕಿಮೀ ಇರುತ್ತದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ಆರೋಪಿಗಳು ಚಾಸಾ.3 ರವರಿಗೆ ಹೊಲೆಯ ಜಾತಿಯವಳು ಎಂದು ನಿಂದಿಸಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ ಶ್ರೀ ಬಿ.ಸಿ.ವಿ., ವಕೀಲರಿಂದ ಆರೋಪಿಗಳ ಪರವಾಗಿಃ

ನಾನು ಮೂಲವಾಗಿ ತಮಿಳುನಾಡು ರಾಜ್ಯದ ವಾಸಿ. ನಾನು ಚನ್ನಪಟ್ಟಣಕ್ಕೆ ಬಂದು ಸುಮಾರು 14 ವರ್ಷಗಳಾಗಿವೆ. ನಾನು ಚನ್ನಪಟ್ಟಣದ ಆನಂದಪುರದಲ್ಲಿ ಒಂದು ಚರ್ಚ್ ನ್ನು ಬಾಡಿಗೆಗೆ ಪಡೆದು ನಡೆಸುತ್ತಿದ್ದೇನೆ ಎನ್ನುವುದು ಸರಿ. ಚಾಸಾ.3 ಸಹ ನಾನು ವಾಸವಿರುವ ಆನಂದಪುರದಲ್ಲಿಯೇ ನಿವಾಸಿಯಾಗಿರುತ್ತಾರೆ ಎನ್ನುವುದು ಸರಿ. ಚಾಸಾ.3 ರಿಂದ 9 ರವರುಗಳು ನಮ್ಮ ಚರ್ಚ್ ಗೆ ನಿಯಮಿತವಾಗಿ ಬಂದು

ಹೋಗುತ್ತಾರೆ ಎನ್ನುವುದು ಸರಿ. ಚಾಸಾ.10 ಬೇರೆ ಚರ್ಚ್ ಗೆ ಹೋಗುತ್ತಾರೆ ಎನ್ನುವುದು ಸರಿ. ನಾನು ಮೂಲವಾಗಿ ಗೌಡ ಜನಾಂಗದವನು. ಚಾಸಾ.2 ನನ್ನ ಹೆಂಡತಿ ಮೂಲತಃ ಕ್ರಿಶ್ಚಿಯನ್. ನಾನು ಚಾಸಾ.2 ರವರನ್ನು ವಿವಾಹವಾಗಿ 13 ವರ್ಷಗಳಾಗಿವೆ. ನನ್ನದು ನಿಶ್ಚಿತಗೊಂಡ ವಿವಾಹವಾಗಿಲ್ಲ ಎನ್ನುವುದು ಸರಿಯಲ್ಲ. ನಾನು ಚಾಸಾ.2 ರವರನ್ನು ತಮಿಳುನಾಡಿನಿಂದ ಅಪಹರಿಸಿಕೊಂಡು ಬಂದಿರುತ್ತೇನೆ ಎನ್ನುವುದು ಸರಿಯಲ್ಲ. ಚಾಸಾ.3 ರಿಂದ 10 ರವರುಗಳು ಪರಿವರ್ತಿತ ಕ್ರಿಶ್ಚಿಯನ್ ಆಗಿರುತ್ತಾರೆ ಎನ್ನುವುದು ಸರಿ.

2. ದಿಃ04.09.2019 ರಂದು ನಾನು ಸರ್ವೆ ನಂಬರ್.68/3 ರ 15 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತೇನೆ. ನಾನು ಈ ಜಮೀನನ್ನು ಖರೀದಿ ಮಾಡುವ ಮುನ್ನ ಅತ್ತಿಬೆಲೆಯಲ್ಲಿ ಜಮೀನು ಹೊಂದಿರುತ್ತೇನೆ. ನಾನು 1.1 ಗುಂಟೆಯಷ್ಟು ನಿವೇಶನದ ಜಮೀನನ್ನು ಹೊಂದಿದ್ದೆ. ನನ್ನದು ವ್ಯವಸಾಯದ ಜಮೀನು ಇಲ್ಲ ಎಂದರೆ ಸರಿ.

3. ನನಗೆ ಚನ್ನಪಟ್ಟಣ ಸುತ್ತಮುತ್ತ ಚರ್ಚ್ ಗಳನ್ನು ನಿರ್ಮಿಸಬೇಕೆಂಬ ಉದ್ದೇಶ ಇತ್ತು ಎನ್ನುವುದು ಸರಿಯಲ್ಲ. ನಾನು

ಚರ್ಚ್ ಕಟ್ಟಬೇಕೆಂಬ ಉದ್ದೇಶದಿಂದಲೇ ಸದರಿ ಜಮೀನನ್ನು ಖರೀದಿಸಿದ್ದೆ ಎಂದರೆ ಸದ್ಯಕ್ಕೆ ಇರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

4. ನಾನು ಖರೀದಿಸಿದ ಜಮೀನಿನಿಂದ ಸುಮಾರು 100 ಮೀಟರ್ ಅಂತರದಲ್ಲಿ ಒಂದು ಏಳುಮಂದಮ್ಮ ಎನ್ನುವ ದೇವಾಲಯ ಉತ್ತರ ದಿಕ್ಕಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ 100 ಮೀಟರ್ ಅಂತರದಲ್ಲಿ ಒಂದು ಮಂದಪ್ಪಸ್ವಾಮಿ ಎನ್ನುವ ದೇವಾಲಯ ಪೂರ್ವ ದಿಕ್ಕಿನಲ್ಲಿ ಇದೆ ಎಂದರೆ ಸರಿಯಲ್ಲ. ನಾನು ಖರೀದಿಸಿದ ಜಮೀನಿನಿಂದ ಸುಮಾರು 200 ಮೀಟರ್ ಅಂತರದಲ್ಲಿ ಒಂದು ಸರ್ಕಾರಿ ಶಾಲೆ ಮತ್ತು ಆಸ್ಪತ್ರೆ ಇವೆ ಎಂದರೆ ಸರಿ.

5. ದಿಃ23.02.2020 ರಂದು ನಾನು, ಸಾಕ್ಷಿದಾರರು ಮತ್ತು ನಮ್ಮ ಸಮುದಾಯದವರು ಎಲ್ಲಾರೂ ಸದರಿ ಜಮೀನಿನ ಬಳಿ ಸೇರಿದ್ದೆವು ಎನ್ನುವುದು ಸರಿಯಲ್ಲ. ಸದರಿ ಜಮೀನಿನಲ್ಲಿ ನಾವು ಶಾಮಿಯಾನ ಹಾಕಿ, ಮದ್ಯಪಾನ ಮಾಡಿ, ಕುಣಿದಾಡುತ್ತಿದ್ದೆವು ಎಂದರೆ ಅಪ್ಪಟ ಸುಳ್ಳು ಎಂದು ಸಾಕ್ಷಿ ನುಡಿಯುತ್ತಾರೆ. ಅದರಿಂದ ಸಂತೆಮೊಗೇನಹಳ್ಳಿ ಗ್ರಾಮದ ಹಿರಿಯರು, ಗ್ರಾಮಸ್ಥರು ಹೀಗೆ ಮಾಡಬೇಡಿ ಎಂದು ಕೇಳಿಕೊಂಡರು ಎನ್ನುವುದು ಸರಿಯಲ್ಲ. ನಾವು ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದೆವು ಎನ್ನುವುದು ಸರಿಯಲ್ಲ. ಗ್ರಾಮಸ್ಥರು 1 ನೇ ಆರೋಪಿಗೆ

ಗ್ರಾಮ ಪಂಚಾಯ್ತಿ ಸದಸ್ಯನಾಗಿದ್ದರಿಂದ ನಾವು ಈ ರೀತಿ ಮಾಡುತ್ತಿದ್ದುದನ್ನು ತಿಳಿಸಿದ್ದರು ಎನ್ನುವುದು ಸರಿಯಲ್ಲ. ಆ ಕಾರಣದಿಂದ 1ನೇ ಆರೋಪಿ ನನ್ನ ಬಳಿ ಬಂದು ಹೀಗೆ ಮಾಡಬೇಡಿ ಎಂದು ಕೇಳಿಕೊಂಡರು ಎನ್ನುವುದು ಸರಿಯಲ್ಲ. 1ನೇ ಆರೋಪಿ ಪ್ರಶ್ನಿತ ಘಟನೆಯ ದಿನದಂದು ಜಮೀನಿನ ಬಳಿಬರುವ ಮುನ್ನ ಆತ ಯಾರು, ಎಲ್ಲಿಯವನು ಎಂದು ತಿಳಿದಿರಲಿಲ್ಲ ಎನ್ನುವುದು ಸರಿ. ಯಾವುದೇ ವಿಚಾರಕ್ಕೆ ಸಂಬಂಧಪಟ್ಟಂತೆ ಘಟನೆಗೆ ಮುನ್ನ 1ನೇ ಆರೋಪಿ ಯನ್ನು ಭೇಟಿ ಮಾಡಿರಲಿಲ್ಲ ಎನ್ನುವುದು ಸರಿ. 1ನೇ ಆರೋಪಿಗೆ ನಾನು ಯಾರು, ಏನು ಎಂಬ ಯಾವುದೇ ವಿಚಾರ ತಿಳಿದಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

6. ನಾನು ನಿ.ಪಿ.1ನ್ನು ನನ್ನೊಂದಿಗೆ ಇತರೆಯವರೂ ಸಹ ಜಂಟಿಯಾಗಿ ನೀಡಿದ್ದು ಆಗಿರುತ್ತದೆ ಎನ್ನುವುದು ಸರಿ. ನಿ.ಪಿ.1ನ್ನು ನೀಡಿದ ನಂತರ ನಾನು ಮತ್ತೊಂದು ಅರ್ಜಿಯನ್ನು ಪೊಲೀಸ್ ಠಾಣೆಗೆ ನೀಡಿದ್ದೆ ಎನ್ನುವುದು ಸರಿಯಲ್ಲ. ನಾನು ಪೊಲೀಸರಿಗೆ ಆರೋಪಿಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುವುದು ಬೇಡ, ಏನಾದರೂ ಪರಿಹಾರ ಕೊಡಿಸಿ ಎಂದು ಅರ್ಜಿ ನೀಡಿದ್ದೆ ಎನ್ನುವುದು ಸರಿಯಲ್ಲ. ನಾನು

ಪೊಲೀಸರಿಗೆ ಆರೋಪಿಗಳು ಬಂದು ಬಗೆಹರಿಯದಿದ್ದರೆ ಮಾತ್ರ ಪ್ರಕರಣ ದಾಖಲಿಸಿ ಎಂದು ಹೇಳಿದ್ದೆ ಎನ್ನುವುದು ಸರಿ.

7. ನಾನು ಚನ್ನಪಟ್ಟಣ ಮತ್ತು ಸುತ್ತಮುತ್ತಲ ಜನರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಪರಿವರ್ತನೆಗೊಳ್ಳುವಂತೆ ಒತ್ತಾಯಪಡಿಸಿದ್ದೆವು ಎನ್ನುವುದು ಸರಿಯಲ್ಲ. ನಾನು ಆ ಭಾಗದ ಜನರನ್ನು ಕ್ರಿಶ್ಚಿಯನ್ ಜನಾಂಗಕ್ಕೆ ಪರಿವರ್ತಿಸಬೇಕೆಂಬ ಉದ್ದೇಶ ಇಟ್ಟುಕೊಂಡಿದ್ದೆ ಎನ್ನುವುದು ಸರಿಯಲ್ಲ. 1ನೇ ಆರೋಪಿ ಘಟನೆಯ ಸಮಯದಲ್ಲಿ ಸಂತೆಮೊಗೇನಹಳ್ಳಿ ಗ್ರಾಮ ಪಂಚಾಯ್ತಿಯ ಸದಸ್ಯರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. 1ನೇ ಆರೋಪಿಯ ನೇತೃತ್ವದಲ್ಲಿ ಸುತ್ತಮುತ್ತಲಿನ ಗ್ರಾಮಸ್ಥರು ನಮ್ಮ ಜಮೀನಿನ ಬಳಿ ಪ್ರತಿಭಟನೆ ಮಾಡಿದ್ದರು ಎನ್ನುವುದು ಸರಿಯಲ್ಲ. ಆ ಕಾರಣದಿಂದ ಆರೋಪಿಗಳ ಮೇಲೆ ದ್ವೇಷ ತೀರಿಸಿಕೊಳ್ಳಬೇಕೆಂಬ ಉದ್ದೇಶದಿಂದ ಅವರುಗಳ ವಿರುದ್ಧ ಜಾತಿ ನಿಂದನೆ ಮಾಡಿದರು, ಹಲ್ಲೆ ಮಾಡಿದರು ಎಂದು ಸುಳ್ಳು ದೂರು ನೀಡಿರುತ್ತೇನೆ ಎನ್ನುವುದು ಸರಿಯಲ್ಲ.

8. ನಾನು ವ್ಯವಸಾಯಗಾರನಲ್ಲ ಎನ್ನುವುದು ಸರಿ. ಚಾಸಾ.4ರವರು ಬೆಳಿಗ್ಗೆ ಸಮಯದಲ್ಲಿ ಕೋಡಂಬಳ್ಳಿಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ.

9. ಆರೋಪಿಗಳು ನಮ್ಮ ಜಮೀನಿನಲ್ಲಿದ್ದ ಕಲ್ಲುಗಳನ್ನು ಮುರಿದು ಹಾಕಿದ್ದನ್ನು ನಾನು ಕಣ್ಣಾರೆ ನೋಡಿಲ್ಲ ಎನ್ನುವುದು ಸರಿ. ನಾನು ವಾಸವಿದ್ದ ಜಾಗ ಚನ್ನಪಟ್ಟಣ ಟೌನ್‌ನಲ್ಲಿ ಪೊಲೀಸ್ ಠಾಣೆಯ ಅಕ್ಕಪಕ್ಕ ಇರುತ್ತದೆ ಎನ್ನುವುದು ಸರಿ. ನಾನು ಪ್ರಶ್ನಿತ ಘಟನೆಯ ದಿನದಂದು ಆರೋಪಿಗಳು ಹಲ್ಲೆ ಮಾಡಿದ ವಿಚಾರವನ್ನು ಚನ್ನಪಟ್ಟಣ ಯಾವುದೇ ಠಾಣೆಗೆ ತಿಳಿಸಲಿಲ್ಲ.

10. ನಾನು ಮಾರನೇ ದಿನ ಬೆಂಗಳೂರಿಗೆ ಹೋಗುವಾಗಲೂ ಯಾವುದೇ ಠಾಣೆಗೆ ಅಥವಾ ಡಿವೈಎಸ್‌ಪಿ ಕಚೇರಿಗೆ ತಿಳಿಸಲಿಲ್ಲ.

11. ನಿ.ಪಿ.3 ರಿಂದ 6 ಭಾವಚಿತ್ರಗಳು ನಿ.ಪಿ.2 ರ ಕಾಲದಲ್ಲಿಯೇ ತೆಗೆಯಲಾಗಿರುತ್ತದೆ ಎಂದರೆ ನಿ.ಪಿ.5 ಮತ್ತು 6 ಭಾವಚಿತ್ರಗಳನ್ನು ಮಾತ್ರ ನಿ.ಪಿ.2 ರ ಕಾಲದಲ್ಲಿ ತೆಗೆಯಲಾಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ದಿಃ26.02.2017 ಕ್ಕೆ ಮುನ್ನ ತೆಗೆದಿಲ್ಲ ಎಂದರೆ ಸರಿಯಲ್ಲ. ಅಕ್ಟೋಬರ್ 2020 ರಲ್ಲಿ ಪೊಲೀಸರು ಬಂದಾಗ ವಿಚಾರಣೆ ಮಾಡಿದ್ದು ನಿ.ಪಿ.3 ಮತ್ತು 4 ನ್ನು ನನ್ನಿಂದ ಪಡೆದಿರುತ್ತಾರೆ.

12. ನನ್ನ ಜಮೀನಿನಲ್ಲಿ ಪ್ರಶ್ನಿತ ಘಟನೆಯ ನಂತರವೂ ಯಾವುದೇ ಕಂಬಗಳು ಮುರಿದ ಸ್ಥಿತಿಯಲ್ಲಿರಲಿಲ್ಲ, ಯತಾಸ್ಥಿತಿಯಲ್ಲಿದ್ದವು ಎನ್ನುವುದು ಸರಿಯಲ್ಲ. ನಾವೇ ಕಲ್ಲುಗಳನ್ನು ಮುರಿದು ಹಾಕಿ

ಆರೋಪಿಗಳ ವಿರುದ್ದ ಸೃಷ್ಟಿತವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಿ.ಪಿ.1ನ್ನು ಸೃಷ್ಟಿಸಿರುತ್ತೇವೆ ಎನ್ನುವುದು ಸರಿಯಲ್ಲ. 27ನೇ ತಾರೀಖು ಬೆಳಿಗ್ಗೆ ನಾನು ಮತ್ತು ಪೊಲೀಸರು ಆರೋಪಿಗಳ ವಿರುದ್ದ ನಿ.ಪಿ.1ನ್ನು ಸೃಷ್ಟಿಸಿರುತ್ತೇವೆ ಎನ್ನುವುದು ಸರಿಯಲ್ಲ.

13. ನಿ.ಪಿ.2ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದು, ಘಟನಾ ಸ್ಥಳದಲ್ಲಿ ಸಹಿ ಮಾಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿಗಳು ನಾವು ನೆಟ್ಟಿದ್ದ ಕಲ್ಲುಗಳನ್ನು ನಮ್ಮ ಜಮೀನಿನಲ್ಲಿ ಮುರಿದು ಹಾಕಿ ರೂ 1 ಲಕ್ಷಗಳಷ್ಟು ನಷ್ಟ ಉಂಟು ಮಾಡಿರುತ್ತಾರೆಂದು ತೋರಿಸಲು ಯಾವುದೇ ತೋಟಗಾರಿಕಾ ಇಲಾಖೆಯಿಂದ ದಾಖಲೆ ಪಡೆದು ಪೊಲೀಸರಿಗೆ ನೀಡಿಲ್ಲ. ನಾನು ಕಲ್ಲುಗಳನ್ನು ಖರೀದಿಸಿದ್ದೆ ಎಂದು ತೋರಿಸುವುದಕ್ಕೆ ಪೊಲೀಸರಿಗೆ ಯಾವುದೇ ದಾಖಲೆ ತೋರಿಸಿಲ್ಲ ಎನ್ನುವುದು ಸರಿ. ಆರೋಪಿಗಳು ನಾನು ಹಿಂದೂಗಳನ್ನು ಕ್ರಿಶ್ಚಿಯನ್ ಜನಾಂಗಕ್ಕೆ ಪಶಿವರ್ತನೆ ಮಾಡಲು ಒತ್ತಾಯಪೂರ್ವಕವಾಗಿ ಪ್ರಯತ್ನಿಸಿದ್ದನ್ನು ಅಡ್ಡಿಪಡಿಸಿದರು ಎಂಬ ಕಾರಣಕ್ಕೆ ಸುಳ್ಳು ಪ್ರಕರಣವನ್ನು ಆರೋಪಿಗಳ ವಿರುದ್ದ ಸೃಷ್ಟಿಸಿರುತ್ತೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.